**ಸಿ.ಸಿ. ನಂ. 347/2014** **ಪಿ.ಡಬ್ಲ್ಯೂ-8**

**ಸಾಕ್ಷಿಗೆ ದಿನಾಂಕ 21.5.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ದಿನಾಂಕ 8.10.2007 ರಂದು ಸಹಕಾರ ಸಂಘಗಳ ಉಪನಿಬಂಧಕರು, ಹುಣಸೂರು ರವರು ನನ್ನನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುವ ಆದೇಶದ ದೃಢೀಕೃತ ಪ್ರತಿಯನ್ನು ಸಿ.ಸಿ ನಂ.344/2014 ರಲ್ಲಿ ನಿಪಿ29 ಎಂದು ಮತ್ತು ವಿಚಾರಣಾ ವರದಿ (ಒಟ್ಟು 113 ಪುಟಗಳು) ಯನ್ನು ನಿಪಿ30 ಎಂದು ಗುರುತಿಸಲಾಗಿರುತ್ತದೆ.

ದಿನಾಂಕ 8.3.2013 ರಂದು ಈ ಪ್ರಕರಣದ ಪೋಲಿಸ್ ತನಿಖಾಧಿಕಾರಿಯವರು ಲ್ಯಾಂಪ್ಸ್ ಸೊಸೈಟಿಗೆ ಭೇಟಿ ನೀಡಿ 2001 ರಿಂದ 2007 ನೇ ಸಾಲಿಗೆ ಸಂಬಂಧಪಟ್ಟ ಕ್ಯಾಶ್ ಬುಕ್, ಸ್ಟಾಕ್ ಬುಕ್, ನಡವಳಿ ಪುಸ್ತಕ, ವಾರ್ಷಿಕ ಮಹಾಸಭೆಯ ನಡಾವಳಿ ಪುಸ್ತಕ, ವಿಚಾರಣಾ ವರದಿ, ಆಡಿಟ್ ವರದಿಯನ್ನು ಹಾಜರುಪಡಿಸುವಂತೆ ಚಾಸ 14 ರವರ ಬಳಿ ಕೇಳಿದ್ದು, ಚಾಸ 14 ರವರು ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದು ಸದರಿ ಸಮಯದಲ್ಲಿ ನಾನು ಹಾಗೂ ಚಾಸ 16 ರವರು ಹಾಜರಿದ್ದು ನಮ್ಮ ಸಮಕ್ಷಮ ಸದರಿ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವೆರೆಗೆ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಸದರಿ ಮಹಜರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಮೂಲ ಮಹಜರನ್ನು ಸಿ.ಸಿ. 344/2014 ರಲ್ಲಿ ಹಾಜರುಪಡಿಸಿದ್ದು, ಸದರಿ ಯಥಾ ಪ್ರತಿಯನ್ನು ಈಗಾಗಲೇ ನಿಪಿ5 ಎಂದು ಈ ಪ್ರಕರಣದಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿದಾರರು ಸದರಿ ದಿನ ಅಮಾನತ್ತುಪಡಿಸಿಕೊಂಡಿರುವ ವಿಚಾರಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ6 ಎಂದು, 2001-02, 2002-03, 2003-04, 2005-06 ರಿಂದ 2009-10 ನೇ ಸಾಲಿನ ಲೆಕ್ಕಪರಿಶೋಧನ ವರದಿಯನ್ನು ಈಗಾಗಲೇ ನಿಪಿ7 ರಿಂದ ನಿಪಿ10 ಎಂದು, ದಾಸ್ತಾನು ಪುಸ್ತಕವನ್ನು ಈಗಾಗಲೇ ನಿಪಿ11 ಎಂದು, 2001-02, 2002-03, 2003-04, 2004-05, 2005 ರಿಂದ 2007 ನೇ ಸಾಲಿನ ನಗದು ಪುಸ್ತಕಗಳನ್ನು ಈಗಾಗಲೇ ನಿಪಿ12 ರಿಂದ ನಿಪಿ16 ಎಂದು, 2006-07 ನೇ ಸಾಲಿನ ಠರಾವು ಪುಸ್ತಕವನ್ನು ಈಗಾಗಲೇ ನಿಪಿ17 ಎಂದು, ವಾರ್ಷಿಕ ಮಹಾಸಭೆಯ ಪುಸ್ತಕವನ್ನು ಈಗಾಗಲೇ ನಿಪಿ18 ಎಂದು ಸಿ.ಸಿ. 344/2014 ರಲ್ಲಿ ಗುರುತಿಸಲಾಗಿರುತ್ತದೆ. ದಿನಾಂಕ 4.10.1996 ರಿಂದ 24.12.2006 ರವರೆಗಿನ ಠರಾವು ಪುಸ್ತಕವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಸಿ.ಸಿ 348/2014 ರಲ್ಲಿ

ನಿಪಿ3 ಎಂದು ಗುರುತಿಸಲಾಗಿರುತ್ತದೆ. ಮೇಲೆ ಹೇಳಿದ ವಿಚಾರವಾಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಟಿ.ಕೆ ವಕೀಲರಿಂದಃ</u>**

ನನ್ನನ್ನು 2001-02 ರಿಂದ 2006-07 ನೇ ಸಾಲಿನ ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆದೇಶ ಮಾಡಿದ್ದರು. ನಿಪಿ29 ರಲ್ಲಿ ದಿನಾಂಕ 1.1.2003 ರಿಂದ 31.12.2006 ರವರೆಗೆ ವಿಚಾರಣೆ ಮಾಡಲು ಆದೇಶ ಮಾಡಿರುತ್ತಾರೆ. ನಿಪಿ29 ರಲ್ಲಿ ಸಂಘದ ಕಾರ್ಯದರ್ಶಿಯಾಗಿದ್ದ ರಾಜೇಗೌಡರ ಅವಧಿಯ ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಆದೇಶವಾಗಿರುತ್ತದೆ ಎಂದರೆ ಸರಿ. ನಾನು ನನ್ನ ವರದಿಯನ್ನು ದಿನಾಂಕ 30.3.2009 ರಂದು ನೀಡಿರುತ್ತೇನೆ. ನಾನು ವಿಚಾರಣಾ ವರದಿಯನ್ನು ನೀಡಿದಾಗ 2001-02 ರಿಂದ 2006-07 ಅವಧಿವರೆಗೆ ಆಡಿಟ್ ಆಗಿರುವುದನ್ನು ನೋಡಿರುತ್ತೇನೆ. ನಾನು ವಿಚಾರಣಾ ವರದಿ ನೀಡಿದ ನಂತರ ಆಡಿಟ್ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ವಿಚಾರಣಾ ವರದಿ ನೀಡಿದ ನಂತರ ಕಲಂ 68 ರಡಿಯಲ್ಲಿ ವಸೂಲಾತಿಗಾಗಿ ಕೇಸು ದಾಖಲಾಗಿದ್ದು ಸದರಿ ಕೇಸಿನಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆ. ಸದರಿ ಕೇಸು ವಜಾ ಆಗಿರುತ್ತದೆ ಎಂದು ನನಗೆ ಗೊತ್ತಿರುತ್ತದೆ. ಈ ಪ್ರಕರಣದಲ್ಲಿ ನನಗೆ ಪೋಲಿಸರು ನೋಟಿಸನ್ನು ನೀಡಿರುತ್ತಾರೆ. ನಾನು ಪೋಲಿಸರಿಗೆ ಹೇಳಿಕೆ ನೀಡಿದಾಗ ಎಷ್ಟು ಹಣ ದುರುಪಯೋಗವಾಗಿರುತ್ತದೆ ಎಂದು ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ನಿಂಗರಾಜು, ಬಸವರಾಜು ಮತ್ತು ಕಾಳಸ್ವಾಮಿರವರ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿದಾರರು ಕುಮಾರಸ್ವಾಮಿ ಬಗ್ಗೆ ಸಹ ಹೇಳಿಕೆ ನೀಡಿರುತ್ತೇನೆ ಎನ್ನುವರು. ಆ ರೀತಿ ನಾನು ಕುಮಾರಸ್ವಾಮಿರವರ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆಡಿಟ್ ವರದಿಯಲ್ಲಿ ದುರುಪಯೋಗದ ಬಗ್ಗೆ ಯಾವುದೇ ವರದಿ ಇರದಿದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ವಿಚಾರಣಾ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. 2001-02 ರಿಂದ 2002-03 ರ ಸಾಲಿನ ವಿಚಾರಣೆ ಮಾಡಲು ನನಗೆ ಯಾವುದೇ ಆದೇಶ ಇರಲಿಲ್ಲ ಮತ್ತು ನಾನು ಸದರಿ ಅವಧಿಗೆ ಯಾವುದೇ ವಿಚಾರಣಾ ವರದಿಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ನಿಪಿ29 ರಲ್ಲಿ ವಿಚಾರಣೆ ಸಮಯದಲ್ಲಿ ಕಂಡು ಬರುವ ಇತರೆ ಲೋಪದೋಷಗಳ ಬಗ್ಗೆ ವರದಿ ನೀಡುವಂತೆ ಆದೇಶ ಇತ್ತು ಎನ್ನುವರು. ನಿಪಿ29 ರಲ್ಲಿ 2003 ರ ನಂತರದ ಅವಧಿಯ ಬಗ್ಗೆ ವಿಚಾರಣೆ ಮಾಡುವಂತೆ ಆದೇಶವಿದ್ದು ಅದಕ್ಕಿಂತ ಪೂರ್ವದ ಅವಧಿಯ ಬಗ್ಗೆ ವಿಚಾರಣೆ ಮಾಡಲು ಆದೇಶ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ5 ರಂತೆ ಅಮಾನತ್ತು ಮಹಜರ್ ಮಾಡುವ ಪೂರ್ವದಲ್ಲಿ ಪೋಲಿಸರು ನನಗೆ ನೋಟಿಸನ್ನು ನೀಡಿದ್ದರು. ಪೋಲಿಸರು ನನಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ, ಪೋಲಿಸರ ಕೋರಿಕೆಯ ಮೇರೆಗೆ ನಿಪಿ5 ರ ಅಮಾನತ್ತು ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ದಾಖಲೆಗಳನ್ನು

ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಅಮಾನತ್ತು-ಪಡಿಸಿಕೊಂಡಿದ್ದಾರೆ ಎಂದು ಹೇಳುವ ರಿಜಿಸ್ಟರುಗಳ ಮೇಲೆ ಚೀಟಿ ಅಂಟಿಸಿ ನನ್ನ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ದಿನಾಂಕ 8.3.2013 ರಂದು ಪೋಲಿಸರು ಯಾವುದೇ ಅಮಾನತ್ತು ಮಹಜರನ್ನು ಮಾಡಿರುವುದಿಲ್ಲ, ದಿನಾಂಕ ತಿದ್ದುಪಡಿ ಮಾಡಿರುವುದನ್ನು ನೋಡಿ ನಾನು ದಿನಾಂಕ 8.3.2013 ರಂದು ಅಮಾನತ್ತು ಮಹಜರ್ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಮಾಡಿದ್ದಾರೆ ಎಂದು ಹೇಳು ಸಮಯದಲ್ಲಿ ಇತರ ಸಾಕ್ಷಿದಾರರು ಹಾಜರಿರಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ